ಸಿಸಿ 2556/2022

**ಸಾಕ್ಷಿಯನ್ನು ಇಂದು ದಿನಾಂಕಃ 21.02.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಿಡಬ್ಲ್ಯೂ–1**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ನಾನು ಮತ್ತು ನನ್ನ ಅಣ್ಣ ಹನುಮಂತಪ್ಪ ಇಬ್ಬರು ಮಕ್ಕಳು. ಸದರಿ ಹನುಮಂತಪ್ಪರವರು ಈ ಪ್ರಕರಣದಲ್ಲಿ ಸಾಕ್ಷಿದಾರರು ಎಂದರೆ ಸರಿ. ಟ್ರಾಕ್ಟರ್ ಇಂಜಿನ್ ಮೇಲೆ 3 ಜನ ಕುಳಿತಿದ್ದೇವು, ಅವರೆಂದರೆ ರಾಜಪ್ಪ, ನಾನು, ಹನುಮಂತಪ್ಪ. ಆ ಸಮಯದಲ್ಲಿ ಟ್ರಾಕ್ಟರ್ ನ್ನು ಪವನ್ ಎಂಬುವವನು ಚಾಲನೆ ಮಾಡುತ್ತಿದ್ದ. ನೀವು 2 ನೇ ಆರೋಪಿಯೊಂದಿಗೆ ಹರಿಹರದಿಂದ ಶಿವಮೊಗ್ಗ ಕಡೆಗೆ ಹೋಗುತ್ತಿದ್ರಿ ಎಂದರೆ ಸಾಕ್ಷಿಯು ಶಿವಮೊಗ್ಗದಿಂದ ಹರಿಹರದ ಕಡೆಗೆ ಬರುತ್ತಿದ್ದೇವು ಎಂದು ನುಡಿಯುತ್ತಾರೆ. ನಾನು ವಾರದಲ್ಲಿ 6 ದಿನಗಳ ಕಾಲ ಕೂಲಿ ಕೆಲಸ ಮಾಡುತ್ತೇನೆ. ಪ್ರತಿ ಭಾನುವಾರ ನನಗೆ ರಜೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಿನದಂದು 9.00 ಗಂಟೆಗೆ ನಾವು ಕಾಗಿನೆಲೆಯಿಂದ ಬಿಟ್ಟಿರುತ್ತೇವೆ. ಕಾಗಿನೆಲೆಯಿಂದ ಅಪಘಾತವಾಗಿದೆ ಎಂದು ಹೇಳಲಾದ ಸ್ಥಳ 400 ಮೀಟರ್ ಆಗುತ್ತದೆ. 400 ಮೀಟರ್ ಸ್ಥಳ ಕ್ರಮಿಸಲು 5 ನಿಮಿಷಗಳ ಕಾಲ ಸಮಯ ಸಾಕಾಗುತ್ತದೆ ಎಂದರೆ ಸರಿ. ಅಪಘಾತವಾಗಿದೆ ಎಂದು ಹೇಳಲಾದ ರಸ್ತೆಯ ಎಡ ಮತ್ತು ಬಲಬದಿಗಳಲ್ಲಿ ಯಾವುದೇ ಬೀದಿ ದೀಪ ಇರಲಿಲ್ಲ ಮತ್ತು ಕತ್ತಲೆಯಾಗಿತ್ತು ಎಂದರೆ ಸರಿ. ಆದ್ದರಿಂದ ಅಲ್ಲಿ ಯಾವ ವಾಹನಗಳು ಸಂಚಾರ ಇತ್ತು ಎಂದು ಗುರುತಿಸಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಮ್ಮ ಟ್ರಾಕ್ಟರ್ ಹಿಂದಿನಿಂದ ಒಂದು ಕಾರು ಬಂದು ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿದ್ದು, ಸದರಿ ಕಾರು ನಂಬರ್ ನನಗೆ ಹೇಳಲು ಆಗುವುದಿಲ್ಲ. ನಮ್ಮ ಟ್ರಾಕ್ಟರ್ ಮತ್ತು ಟ್ರ್ಯಾಲಿ ನಂಬರ್ ನ್ನು ಹೇಳಲು ಆಗುವುದಿಲ್ಲ. ನಾನು ಪೊಲೀಸರ ಮುಂದೆ ಎರಡು ಬಾರಿ ಹೇಳಿಕೆ ಕೊಟ್ಟಿರುತ್ತೇನೆ. ಪೊಲೀಸರು ಹೇಳಿಕೆ ಕೊಡಲು ನನಗೆ ನೋಟೀಸನ್ನು ಜಾರಿ ಮಾಡಿದ್ದರು. ಮೊದಲನೇ ಬಾರಿ ಪೊಲೀಸರು ಯಾವ ದಿನಾಂಕದಂದು ನೋಟೀಸನ್ನು ಜಾರಿ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಎರಡನೇ ಬಾರಿ ಪೊಲೀಸರು ಯಾವ ದಿನಾಂಕದಂದು ನೋಟೀಸನ್ನು ಜಾರಿ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿದೆ. ನಾನು ಪೊಲೀಸರ ಮುಂದೆ ಯಾವ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ನಾನು ಪೊಲೀಸರ ಮುಂದೆ ಏನು ಹೇಳಿಕೆ ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ದಿನ ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತವಾದ ದಿನ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ ಎಂದು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಆಗಲೀ, ನನ್ನ ಮುಖ್ಯ ವಿಚಾರಣೆಯ ಕಾಲಕ್ಕೆ ಆಗಲೀ ಹೇಳಿರುವುದಿಲ್ಲ. ಈ ರೀತಿ ಪೊಲೀಸರ

ಮುಂದೆ ಆಗಲೀ, ಮುಖ್ಯ ವಿಚಾರಣೆಯಲ್ಲಿ ಆಗಲೀ ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾವು ಹುಲ್ಲನ್ನು ಹೇರಿಕೊಂಡು ಡಾಂಬರ್ ರಸ್ತೆಯ ಮೇಲೆ ಹೋಗುತ್ತಿದ್ದೇವು. ಸದರಿ ರಸ್ತೆಯು ಹರಿಹರ–ಶಿವಮೊಗ್ಗ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನಗಳನ್ನು ಜೋರಾಗಿ ಚಾಲನೆ ಮಾಡಿಕೊಂಡು ಹೋಗುತ್ತಾರೆ ಎಂದರೆ ಸರಿ. 2 ನೇ ಆರೋಪಿಯೂ ಕೂಡ ವಾಹನವನ್ನು ಜೋರಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತವಾಗಿದೆ ಎಂದು ಹೇಳಲಾದ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ನಲ್ಲಿ ಹುಲ್ಲನ್ನು ಎಷ್ಟು ಎತ್ತರದವರೆಗೆ ಲೋಡ್ ಮಾಡಲಾಗಿತ್ತು ಎಂದರೆ ಸಾಕ್ಷಿಯು ಎರಡುವರೆ ಅಡಿ ಎಂದು ನುಡಿಯುತ್ತಾರೆ. ಹುಲ್ಲನ್ನು ಎಷ್ಟು ಅಡಿಯವರೆಗೆ ಅಗಲವಾಗಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ಮುಂದುವರೆದು ಟ್ರಾಕ್ಟರ್ ನಿಂದ ಅರ್ಧ ಅಡಿ ಅಗಲ ಹರಡಿತ್ತು ಎಂದು ನುಡಿಯುತ್ತಾರೆ. ಅಪಘಾತವಾದ ನಂತರ ಟ್ರಾಕ್ಟರ್ ನಿಂದ ನಾನು, ನನ್ನ ತಂದೆ ಮತ್ತು ಚಾಸಾ.7 ರವರು ಕೆಳಗೆ ಬಿದ್ದೇವು. ಕಾರು ನಮ್ಮ ಟ್ರಾಕ್ಟರ್ ಗೆ ಹಿಂದಿನಿಂದ ಡಿಕ್ಕಿಪಡಿಸಿದಾಗ ನಮ್ಮ ಟ್ರಾಕ್ಟರ್ ಜಖಂಗೊಂಡಿರುತ್ತದೆ. ಟ್ರಾಕ್ಟರ್ ನ ಹಿಂದೆ ಇರುವ ಬಾಗಿಲು ಬೆಂಡ್ ಆಗಿ ನೆಗ್ಗಿತ್ತು. ಅಪಘಾತವಾದ ನಂತರ ಅಲ್ಲಿ ಸಾಕಷ್ಟು ಜನ ಸೇರಿದ್ದರು ಮತ್ತು ಕಾರಿನಲ್ಲಿ ಪ್ರಯಾಣ ಮಾಡುತ್ತಿರುವವರು ಸಹ ಬಂದು ನೋಡುತ್ತಿದ್ದರು ಎಂದರೆ ಸಾಕ್ಷಿಯು ಅಲ್ಲಿಯೇ ಇದ್ದ ಜನ ನೋಡುತ್ತಿದ್ದರು ಆದರೆ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದ ಜನ ನೋಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಮೊದಲನೇ ಹೇಳಿಕೆ ನೀಡಿದ ನಂತರ ಎಷ್ಟು ದಿನಗಳು ಕಳೆದ ಮೇಲೆ 2 ನೇ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಮೊದಲನೇ ಹೇಳಿಕೆ ನೀಡುವ ಕಾಲಕ್ಕೆ ನೋಟೀಸನ್ನು ಜಾರಿ ಮಾಡಿದ್ದರು. ಮುಂದುವರೆದ ಹೇಳಿಕೆ ನೀಡುವಾಗ ಸಹ ಪೊಲೀಸರು ನನಗೆ ನೋಟೀಸ್ ಜಾರಿ ಮಾಡಿದ್ದರು ಆದರೆ ನನಗೆ ಅದರ ದಿನಾಂಕ ಗೊತ್ತಿಲ್ಲ. ಸದರಿ ಅಪಘಾತವು ಟ್ರಾಕ್ಟರ್ ಚಾಲಕನು ಏಕಾಏಕಿ ಬ್ರೇಕ್ ನ್ನು ಹಾಕಿದ್ದರಿಂದ ನಾವು ಟ್ರಾಕ್ಟರ್ ನಿಂದ ಕೆಳಗೆ ಬಿದ್ದು, ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. 2 ನೇ ಆರೋಪಿತನ ತಪ್ಪಿನಿಂದಲೇ ಸದರಿ ಅಪಘಾತವಾಗಿದ್ದು, 1 ನೇ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿಮಾ ಸೌಲಭ್ಯವನ್ನು ಪಡೆಯುವುದಕ್ಕೋಸ್ಕರ ಕಣ್ಣಾರೆ ನೋಡಿದೆ ಎಂದು ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರೇ ಟ್ರಾಕ್ಟರ್ ನಿಂದ ಸ್ವತಃ ಬಿದ್ದು, ಅದರಿಂದ ಅವರು ಗಾಯಗಳಾಗಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಹರಿಹರ.